9-12-24

(5)

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ. ತಳವಾರ ಸಾಬಣ್ಣಾ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ವಿಷಯ: ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಕುರಿತು.**

ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ ಎಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ತೊಗರಿಯ ಕಣಜ ಎಂದೇ ಖ್ಯಾತಿ ಪಡೆದ ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಹೆಚ್ಚಾಗಿ ಬೆಳೆಯಲಾಗುತ್ತದೆ. ತೊಗರಿಗೆ ಹಿಂದೆ ನೆಟೆ ರೋಗ ಬಂದು ರೈತರು ಸಾಕಷ್ಟು ನಷ್ಟ ಅನುಭವಿಸಿದ್ದರು. ಅದೇ ರೀತಿ ತೊಗರಿ ಬೆಳೆ ಒಣಗಿಸುವ ರೋಗ ಬಾಧೆಯಿಂದ ಕಲಬುರಗಿ ಜಿಲ್ಲೆಯಲ್ಲಿ ಲಕ್ಷಾಂತರ ಹೆಕ್ಟೇರ್ ಬೆಳೆಹಾನಿಯಾಗಿದೆ. ತೇವಾಂಶ ಕೊರತೆ ಇರುವ ಹೊಲದಲ್ಲಿ ತೊಗರಿ ರೋಗ ಬಾಧೆಯಿಂದ ನಿಧಾನವಾಗಿ ಒಣಗುತ್ತಿದೆ. ಜಿಲ್ಲೆಯಲ್ಲಿ 6,06 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು, ಅದರಲ್ಲಿ ಎರಡು ಲಕ್ಷ ಹೆಕ್ಟೇರ್‌ವರೆಗೆ ತೊಗರಿ ರೋಗ ಬಾಧೆಗೆ ತುತ್ತಾಗಿದೆ ಎನ್ನಲಾಗುತ್ತಿದೆ. ಖಾಸಗಿಯವರಿಂದ ಖರೀದಿಸಿದ ತೊಗರಿ ಬಿತ್ತನೆ ಬೀಜ ಕಳಪೆ ಗುಣಮಟ್ಟದಿಂದ ಕೂಡಿದ್ದು, ಈ ಬೀಜಗಳಿಂದ ತೊಗರಿ ಬೆಳೆಗೆ ರೋಗ ಬಾಧೆ ಕಾಡುತ್ತಿದೆ. ಈ ಹಿನ್ನಲೆಯಲ್ಲಿ, ಕೃಷಿ ಇಲಾಖೆ ತಕ್ಷಣವೇ ಜಂಟಿ ಸಮೀಕ್ಷೆಯನ್ನು ಕೈಗೊಳ್ಳಬೇಕು. ತೊಗರಿ ಬೆಳೆಯಿಂದ ನಷ್ಟಗೊಂಡ ರೈತರಿಗೆ ಪರಿಹಾರ ಒದಗಿಸಬೇಕು ಮತ್ತು ಸರಕಾರ ಒಣಗಿದ ತೊಗರಿಗೆ ವಿಶೇಷ ಪ್ಯಾಕೇಜ್ ಒದಗಿಸಿ ರೈತರ ಬೆನ್ನೆಲುಬಾಗಿ ನಿಲ್ಲಬೇಕೆಂದು ಕೋರಿರುವ ಬಗ್ಗೆ.

<u>ಉತ್ತರ:</u>

ಕಲಬುರ್ಗಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ 2024ರ ನವೆಂಬರ್ ತಿಂಗಳಿನಲ್ಲಿ ವಾಡಿಕೆಯಂತೆ 19.2 ಮಿ. ಮೀ ಮಳೆಯಾಗಬೇಕಿದ್ದು, ಆದರೆ ಕೇವಲ ವಾಸ್ತವವಾಗಿ 5.6 ಮಿ.ಮೀ ಮಳೆಯಾಗಿದ್ದು, ವಾಡಿಕೆಗಿಂತ ಶೇ. 71 ರಷ್ಟು ಮಳೆ ಕೊರತೆಯಾಗಿರುತ್ತದೆ. ಕಳೆದ ನಾಲ್ಕು ವಾರಗಳಿಂದ ಮಳೆ ಬಾರದೆ ಇರುವ ಕಾರಣದಿಂದ ಕಡಿಮೆ ಆಳ ಮತ್ತು ಮಧ್ಯಮ ಆಳದ ಭೂಮಿಯಲ್ಲಿ ತೇವಾಂಶ ಕೊರತೆಯಿಂದ ತೊಗರಿ ಬೆಳೆ ಒಣಗುತ್ತಿರುತ್ತದೆ. ಬಿತ್ತನೆಯಾದ ತೊಗರಿ ಬೆಳೆಯಲ್ಲಿ ತೇವಾಂಶದ ಬಾಧೆಗೆ **"ಮ್ಯಾಕ್ರೋಫೋಮಿನಾ ಫೆಜಿಯೊಲೈ"** ಶೀಲಿಂದ್ರದಿಂದ ಬರುವ ಒಣ ಬೇರು ಕೊಳೆ ರೋಗ

ಹೆಚ್ಚಾಗಿ ಕಾಣಿಸಿಕೊಂಡಿರುತ್ತದೆ. ಅದರೊಂದಿಗೆ **"ಫೈಟೊಫ್ಥೋರಾ ಮಚ್ಚೆ ರೋಗ"** ವು ಅಲ್ಲಲ್ಲಿ ಕಂಡು ಬಂದಿರುವುದರಿಂದ ತೊಗರಿ ಒಣಗಲಾರಂಬಿಸಿರುತ್ತದೆ ಎಂದು ಕೃಷಿ ವಿಜ್ಞಾನಿಗಳ ತಂಡವು ಕ್ಷೇತ್ರ ಬೇಟಿ ನಂತರ ತಾಂತ್ರಿಕ ವರದಿ ನೀಡಿರುತ್ತಾರೆ.

ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ಪ್ರಕಾರ 6.27 ಲಕ್ಷ ಹೆ. ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಸಹಾಯಧನದಲ್ಲಿ 6875.66 ಕ್ವಿಂಟಲ್ ತೊಗರಿ ಬಿತ್ತನೆ ಬೀಜಗಳನ್ನು 32 ರೈತ ಸಂಪರ್ಕ ಕೇಂದ್ರಗಳ ಮೂಲಕ ಪಡೆದು ರೈತರು 55005.28 ಹೆ. ಪ್ರದೇಶದಲ್ಲಿ ಬಿತ್ತನೆ ಮಾಡಿರುತ್ತಾರೆ. ಇದು ಒಟ್ಟು ಬಿತ್ತನೆ ಕ್ಷೇತ್ರಕ್ಕೆ ಹೋಲಿಸಿದಾಗ ಶೇ 8.77 ಮಾತ್ರ ಆಗಿದ್ದು ಉಳಿದ ಶೇ 91.33 ಕ್ಷೇತ್ರಕ್ಕೆ ಬೇಕಾಗುವ ಬೀಜವನ್ನು ರೈತರೆ ಸ್ವತಃ ತಮ್ಮಲ್ಲಿರುವ ಬೀಜಗಳನ್ನು ಅಥವಾ ಇತರೆ ಮೂಲಗಳಿಂದ ಪಡೆದು ಉಪಯೋಗಿಸಿ ಬಿತ್ತನೆ ಕೈಗೊಂಡಿರುತ್ತಾರೆ. ಸಹಾಯಧನದಲ್ಲಿ ವಿತರಿಸಿದ ಬೀಜಗಳಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮದಿಂದ 4630.04 ಕ್ವಿಂಟಲ್ ಬೀಜ ವಿತರಿಸಿದ್ದು ಹಾಗೂ 2245.62 ಕ್ವಿಂಟಲ್ ಬೀಜಗಳನ್ನು ಖಾಸಗಿ ಬೀಜೋತ್ಪದನಾ ಸಂಸ್ಥೆಯಿಂದ ವಿತರಿಸಲಾಗಿದೆ. ಬೀಜ ಅಧಿನಿಯಮದನ್ವಯ ಜಿಲ್ಲೆಯಲ್ಲಿ ಬೀಜ ಪರಿವೀಕ್ಷಕರು 131 ತೊಗರಿ ಬೀಜ ಮಾದರಿಗಳನ್ನು ಬೀಜ ಪರೀಕ್ಷಾಲಯಕ್ಕೆ ಕಳುಹಿಸಿದ್ದು ಅದರಲ್ಲಿ ಯಾವುದೇ ಬೀಜ ಕಳಪೆಯೆಂದು ವರದಿಯಾಗಿರುವುದಿಲ್ಲ.

ಕೃಷಿ ವಿಜ್ಞಾನಿಗಳ ತಂಡವು ಕ್ಷೇತ್ರ ಬೇಟಿ ನೀಡಿ ತಾಂತ್ರಿಕ ವರದಿಯನ್ನು ಸಲ್ಲಿಸಿರುತ್ತಾರೆ ಹಾಗೂ ಆಳದವಾದ ಕಪ್ಪು ಭೂಮಿಯಲ್ಲಿ ಬೆಳೆದ ಮತ್ತು ನೀರಾವರಿ ಪದ್ಧತಿಯಲ್ಲಿ ಬೆಳೆದ ತೊಗರಿ ಬೆಳೆಗಳು ಆರೋಗ್ಯಕರವಾಗಿರುತ್ತವೆ ಎಂದು ವರದಿ ನೀಡಿರುತ್ತಾರೆ. ಮುಂಜಾಗೃತ ಕ್ರಮವಾಗಿ ಇನ್ನೂ ಹೂವಾಡುತ್ತಿರುವ ಹಾಗೂ ಕಾಯಿ ಕಟ್ಟುತ್ತಿರುವ ತೊಗರಿ ಬೆಳೆಗೆ ರೈತರು ಅನುಸರಿಸಬೇಕಾಗದ ಕ್ರಮಗಳನ್ನು ಕೂಡ ಸೂಚಿಸಿರುತ್ತಾರೆ.

2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ಯೋಜನೆಯಡಿ ತೊಗರಿ ಬೆಳೆಗೆ ವಿಮೆ ಮಾಡಿಸಿದ 1.70 ಲಕ್ಷ ರೈತರಿಗೆ ರೂ. 71.80 ಕೋಟಿ ಹಾಗೂ ಇತರೆ ಬೆಳೆಗಳಿಗೆ ವಿಮೆ ಮಾಡಿಸಿದ 0.33 ಲಕ್ಷ ರೈತರಿಗೆ ರೂ. 5.14 ಕೋಟಿ, ಹೀಗೆ ಒಟ್ಟು 2.037 ಲಕ್ಷ ರೈತರಿಗೆ ರೂ.76.94 ಕೋಟಿ ಪರಿಹಾರವನ್ನು ಸ್ಥಳೀಯ ವಿಕೋಪದಡಿ (Localized Calamity) ಜಿಲ್ಲಾ ಮಟ್ಟದ ಕುಂದು ಕೊರತೆ ಪರಿಹಾರ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ.

ರಾಜ್ಯಾದ್ಯಂತ 2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 4.74 ಲಕ್ಷ ರೈತರು ತೊಗರಿ ಬೆಳೆಗೆ ವಿಮೆ ಮಾಡಿಸಿದ್ದು, ಇದರ ಪೈಕಿ ಕಲಬುರಗಿ ಜಿಲ್ಲೆಯಲ್ಲಿ 1.70 ಲಕ್ಷ ರೈತರು ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯಡಿ ನೊಂದಣಿ ಮಾಡಿರುತ್ತಾರೆ. ಸದರಿ ಯೋಜನೆಯು ಇಳುವರಿ ಆಧರಿತವಾಗಿದ್ದು, ಬೆಳೆ ಕಟಾವು ಆದ ನಂತರ ಇಳುವರಿ ಆಧಾರದ ಮೇಲೆ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ವಿಮೆ ಇತ್ಯರ್ಥಪಡಿಸಲಾಗುವುದು.

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು